ಅಸಲ ದಾವಾ ನಂ.276/2022
ಪಿಡಬ್ಲ್ಯೂ:01

**ದಿನಾಂಕ: 10.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು: 1 ಮತ್ತು 3 ನೇ ಪ್ರತಿವಾದಿ ಪರ ಎ.ಜಿ.ಪಿಯವರಿಂದ**

1) ವಾದಿ ನನ್ನ ಚಿಕ್ಕಪ್ಪ. ವಾದಿಯಿಂದ ನಾನು ಮುಕ್ತ್ಯಾರ ಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ವಿಸ್ತೀರ್ಣದ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಪ್ರತಿವಾದಿಯರು ಸ.ನಂ.227/4 ಬಿ ಕ್ಷೇತ್ರ 3 ಎಕರೆ 13 ಗುಂಟೆಯಲ್ಲಿ ಎಷ್ಟು ಕ್ಷೇತ್ರ ಅತಿಕ್ರಮಣ ಮಾಡಿಕೊಂಡಿರುತ್ತಾರೆ ಅಂತಾ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು 6-7 ಗುಂಟೆ ಅಂತಾ ನುಡಿಯುತ್ತಾರೆ. ಸರ್ವೆಯರ್ ಅಳತೆ ಮಾಡಿದ ಮೇರೆಗೆ ನಾನು ಅತಿಕ್ರಮಣದ ಕುರಿತು ನುಡಿಯುತ್ತಿದ್ದೇನೆ ಎಂದರೆ ಸರಿ. ನಿ.ಪಿ.3 ರಲ್ಲಿ ಹಳದಿ ಬಣ್ಣದಲ್ಲಿ ತೋರಿಸಿದ ಸ್ಥಳವನ್ನು ಸರ್ಕಾರಿ ರಸ್ತೆ ಸ.ನಂ.227/4 ಬಿ ಅಲ್ಲಿ ಇರುತ್ತದೆ ಅಂತಾ ನಮೂದು ಮಾಡಿರುತ್ತಾರೆ ಎಂದರೆ ಸರಿ. ದೇಗಿನಾಳ-ಬಾಗೇವಾಡಿ ಚಕ್ಕಡಿಗಾಡಿ ರಸ್ತೆ ಎಂದರೆ ಸರಿಯಲ್ಲ. ಸದರಿ ರಸ್ತೆ ಸುಮಾರು 30 ಅಡಿ ಅಗಲ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಸುಮಾರು 30-40 ವರ್ಷಗಳಿಂದ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಗೆ ಹೊಂದಿಕೊಂಡು ದಾವಾ ಆಸ್ತಿ ಇರುತ್ತದೆ ಎಂದರೆ ಸರಿ. ಅದು ಮುಂಚೆ ಕಚ್ಚಾ ರಸ್ತೆಯಾಗಿತ್ತು ಎಂದರೆ ಸರಿ. ಸದರಿ ಕಚ್ಚಾ ರಸ್ತೆಯನ್ನು ಡಾಂಬರಿಕರಣ ಮಾಡಿ ರಸ್ತೆ ಮಾಡುತ್ತಿದ್ದಾರೆ ಎಂದರೆ ಸರಿ. ಗ್ರಾಮ ನಕ್ಷೆಯಲ್ಲಿರುವ ರಸ್ತೆಯನ್ನು ಅಬಿವೃಧ್ಧಿಪಿಡಿಸಿ ರಸ್ತೆ ಮಾಡಿದ್ದು, ಹಾಗಾಗಿ ದಾವಾ ಆಸ್ತಿಯಲ್ಲಿ ಯಾವುದೇ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಕುರಿತು ಎ.ಡಿ.ಎಲ್.ಆರ್ ಕಚೇರಿಯಿಂದ ಪಡೆದ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ.ವಾದಪತ್ರದೊಂದಿಗೆ ಹಾಜರುಪಡಿಸಿದ ಹಾತ ನಕಾಶೆಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ವಾದ ಪತ್ರದಲ್ಲಿ ಬರೆದಂತೆ ರಸ್ತೆ ಹತ್ತರಕಿಹಾಳ -ಮಸುಬಿನಾಳ ರಸ್ತೆ ಅಂತಾ ಬರೆದುದ್ದನ್ನು ಹಾತ ನಕಾಶೆಯಲ್ಲಿ ಬರೆದು ತೋರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಹೊಂದಿಕೊಂಡ ರಸ್ತೆಗಳ ಅಗಲವನ್ನು ಹೇಳಿ ಬರೆಸಿಲ್ಲ ಎಂದರೆ ಸರಿ. ಹಾತ್ ನಕಾಶೆಯಲ್ಲಿ ತೋರಿಸಿದ ಇ.ಎಫ್.ಸಿ ಸ್ಥಳ ಸರ್ಕಾರಿ ಹಳ್ಳ ಆಗಿರುತ್ತದೆ. ಇ.ಎಫ್.ಸಿ ಕ್ಷೇತ್ರದ ವಿಸ್ತೀರ್ಣ ಬರೆದಿಲ್ಲ ಎಂದರೆ ಸರಿ. ನಾವು ಅತಿಕ್ರಮಣ ಮಾಡಿ ರಸ್ತೆ ಮಾಡುತ್ತಿದ್ದಾರೆ ಅಂತಾ ಹೇಳುವ ರಸ್ತೆಯನ್ನು ಮಾಡಿದ್ದು, ಇನ್ನೂ ಸ್ವಲ್ಪ ಉಳಿದಿರುತ್ತದೆ. ಎಷ್ಟು ಅತಿಕ್ರಮಣ ಮಾಡಿ ರಸ್ತೆ ಮಾಡಿರುತ್ತಾರೆ ಮತ್ತು ಇನ್ನೂ ಎಷ್ಟು ಉಳಿದಿರುತ್ತದೆ ಅಂತಾ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಯದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಕ್ಕ. ದೇಗಿನಾಳ-ಬಾಗೇವಾಡಿ ರಸ್ತೆಯನ್ನು ಡಾಂಬರಿಕರಣ ಮಾಡಿ ಮುಗಿಸಿರುತ್ತಾರೆ ಎಂದರೆ ಸಾಕ್ಷಿಯು 500 ಮೀಟರ್ ಮಾತ್ರ

ಉಳಿದಿರುತ್ತದೆ ಅಂತಾ ನುಡಿಯುತ್ತಾರೆ. ಗ್ರಾಮ ನಕಾಶೆಯಲ್ಲಿ ಇದ್ದ ರಸ್ತೆಯನ್ನು ಸುದಾರಣೆ ಮಾಡಿ ಡಾಬರಿಕರಣ ಮಾಡಿದ್ದು, ಯಾವುದೇ ಜಮೀನನ್ನು ಅತಿಕ್ರಮಣ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಊರಿನ ಹಿರಿಯರು ನಮಗೆ ಬುದ್ಧಿಮಾತು ಹೇಳಿದ ಮೇರೆಗೆ ರಸ್ತೆ ಮಾಡಲು ಒಪ್ಪಿಒಕೊಂಡಿದ್ದೆವು ಎಂದರೆ ಸಾಕ್ಷಿಯು ಮುಂಚೆ ಊರಿನ ಹಿರಿಯರು ನನಗೆ ಹೇಳಲು ಬಂದಾಗ ನಮ್ಮ ಜಮೀನನ್ನು ಬಿಟ್ಟು ರಸ್ತೆ ಮಾಡುವಂತೆ ತಿಳಿಸಿದೆವು ಎಂದು ನುಡಿಯುತ್ತಾರೆ. ಸಾರ್ವಜನಿಕರಿಗೆ ತೊಂದರೆ ಕೊಡಬಾರದು ಅಂತಾ ಸದರಿ ರಸ್ತೆಗೆ ನಾವು ಒಪ್ಪಿಕೊಂಡ ಮ ಮೇರೆಗೆ ಅಲ್ಲಿ ರಸ್ತೆ ನಿರ್ಮಾಣವಾಗಿತ್ತು ಎಂದರೆ ಸರಿಯಲ್ಲ. ವಾದ ಪತ್ರದೊಂದಿಗೆ ಹಾಜರುಪಡಿಸಿದ ಹಾತ್ ನಕಾಶೆ, ವಸ್ತುಸ್ಥಿತಿಗೆ ಅನುಗುಣವಾಗಿರದೇ ಖೊಟ್ಟಿಯಾಗಿ ಸೃಷ್ಠಿಸಿ ಹಾಜರುಪಡಿಸಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.3 ರ ಪ್ರಕಾರ ದಾವಾ ಜಮೀಣಿನಲ್ಲಿ ನಮ್ಮ ಅಣ್ಣತಮ್ಮಂದಿರು ಅತಿಕ್ರಮಣ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಮ್ಮ ಅಣ್ಣತಮ್ಮಂದಿರು ದಾವಾ ಆಸ್ತಿಯಲ್ಲಿ ಅತಿಕ್ರಮಣ ಮಾಡಿದ್ದು, ಅದನ್ನು ಮುಚ್ಚಿ ಹಾಕಲು ಪ್ರತಿವಾದಿರಯರ ವಿರುದ್ದ ಖೊಟ್ಟಿ ಪ್ರಮಾಣ ಪತ್ರ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ನಿರ್ಮಾಣ ವಾದನಂತರ ಅಲ್ಲಿ ಬಸ್ ಮತ್ತು ಸಾರ್ವಜನಿಕರು ಹಾಗೂ ಟ್ರ್ಯಾಕ್ಟರ್ ಮೋಟಾರ್‌ಸೈಕಲ್‌ಗಳು ಓಡಾಡುತ್ತಿವೆ ಎಂದರೆ ಸಾಕ್ಷಿಯು ಟ್ರ್ಯಾಕ್ಟರ್ ಮೋಟಾರ್‌ಸೈಕಲ್‌ಗಳು ಓಡಾಡುತ್ತಿವೆ ಅಂತಾ ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 3 ರವರು ದಾವಾ ಆಸ್ತಿಯಲ್ಲಿ ಯಾವುದೇ ಅತಿಕ್ರಮಣ ಮಾಡಿಲ್ಲ, ಇದ್ದ ರಸ್ತೆಯಲ್ಲಿಯೇ ರಸ್ತೆ ನಿರ್ಮಾಣ ಮಾಡಿದ್ದು, ಅವರಿಗೆ ಕಿರುಕುಳ ಕೊಡಲು ಖೊಟ್ಟಿ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.7 ಮತ್ತು 8 ಛಾಯಾಚಿತ್ರಗಳಲ್ಲಿ ದೇಗಿನಾಳ-ಬಾಗೇವಾಡಿ ರಸ್ತೆಯಲ್ಲಿ ಯಾವ ಸ್ಥಳದಲ್ಲಿ ತೆಗೆದ ಛಾಯಾಚಿತ್ರಗಳು ಅಂತಾ ಹೇಳಲು ಬರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ: ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.